ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Saturday, the 27th June, 1981/Ashada 6, 1903

The House met in the Assembly Chamber Vidhana Soudha, at Nine of the Clock.

[MR. SPEAKER (SRI K. H. RANGANATH) in the Chair.]

STARRED QUESTIONS
(to which oral answers were given)

Stipendiary Employment Scheme in Mandya District.

292. SRI M.S. ATHMANANDA (Mandya).—Will the Minister for Labour be pleased to state.—

(a) the number of Graduates who have registered under Stipendiary Employment scheme in Mandya District upto 1980-81;

(b) the number of Graduates working under this scheme;

(c) the amount allotted to Mandya Dist. for the above scheme?

SRI A.B. JAKANUR (Minister for Labour).—

(a) 2,688 as on 31-1-1981.

(b) 673.

(c) Rs. 15,42,550/- for the year 1980-81.

ಶ್ರೀ ಎಂ.ಎಸ್. ಆತ್ಮಾನಂದ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ೨೬೮೮ ಜನ ಮಂಡ್ಯ ಜಿಲ್ಲೆಯಲ್ಲಿ ಅಭ್ಯರ್ಥನಾ ಉದ್ಯೋಗ ಯೋಜನೆಯ ಮೇರೆಗೆ ನೊಂದಾಯಿಸಿಕೊಂಡಿದ್ದಾರೆ, ಅದರಲ್ಲಿ ೬೭೩ ಜನರು ಹಾಲಿ ಕೆಲಸಮಾಡುತ್ತಿದ್ದಾರೆಂದು ತಾವು ತಿಳಿಸಿದ್ದೀರಿ. ಬಾಕಿ ಅಭ್ಯರ್ಥಿಗಳನ್ನೂ ಈ ಯೋಜನೆಯನ್ವಯ ಉದ್ಯೋಗದಲ್ಲಿ ತೊಡಗಿಸುತ್ತೀರಾ?

ಶ್ರೀ ಎಂ. ವೀರಪ್ಪಮೊಯ್ಲಿ (ಮಾನ್ಯ ಜಕನೂರ್ ಪರವಾಗಿ).—ಈ ಯೋಜನೆಯನ್ನು ಪ್ರಾರಂಭ ಮಾಡಿದ ಉದ್ದೇಶವೆಂದರೆ ಈ ಅಭ್ಯರ್ಥಿಗಳಿಗೆ ಬೇರೆ ಕೆಲಸ ಸಿಕ್ಕುವತನಕ ಅಥವಾ ಅವರು ಸ್ವಂತಉದ್ಯೋಗದಲ್ಲಿ ತೊಡಗುವವರೆಗೆ ಒಂದು ರೀತಿಯಲ್ಲಿ ಪರಿಹಾರ ರೂಪದಲ್ಲಿಕೊಡಬೇಕೆಂದು ಮಾಡಿದ್ದು. ಇದರ ಪ್ರಕಾರ ಈ ಅಭ್ಯರ್ಥಿಗಳು ಬೇರೆ ಉದ್ಯೋಗಕ್ಕೆ ಸೇರಬೇಕಾಗಿತ್ತು ಇಲ್ಲವೇ ಸ್ವಂತ ಉದ್ಯೋಗವನ್ನಾದರೂ ಮಾಡಬೇಕಾಗಿತ್ತು. ಇದು ಯಾವುದನ್ನೂ ಮಾಡದೆ ಇವರು ನಿಂತಿದ್ದಾರೆ. ಯಾವ ಒಂದು ಒಳ್ಳೆಯತನದಿಂದ ನಾವು ಇವರಿಗಾಗಿ ಉದ್ಯೋಗವನ್ನು ಕೊಟ್ಟಿದ್ದೇವೆ ಇದರಲ್ಲೇ ನಮ್ಮನ್ನು ಖಾಯಂ ಮಾಡಿ ಎಂದು ಅವರು ಚಳುವಳಿಯನ್ನು ಹೂಡಿದ್ದಾರೆ, ಇದರಿಂದಾಗಿ ನಾವು ಪ್ರಾರಂಭ ಮಾಡಿದ ಯೋಜನೆಯ

ಉದ್ದೇಶ ಈಗ ಬುಡಮೇಲಾಗುವ ಪರಿಸ್ಥಿತಿ ಬಂದಿದೆ. ನಾವು ಇದನ್ನೇ ನೆಚ್ಚಿಕೊಂಡಿದ್ದೇವೆ, ನಾವು ನಿರ್ಗತಿಕರಾಗಿದ್ದೇವೆ ಆದ್ದರಿಂದ ನಮ್ಮನ್ನು ಇಲ್ಲೇ ಖಾಯಂ ಮಾಡಬೇಕೆಂದು ಹೇಳುತ್ತಿದ್ದಾರೆ. ಇದರಿಂದಾಗಿ ಹೊಸದಾಗಿ ಬರತಕ್ಕ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ಇಚ್ಛೆ ಸರ್ಕಾರಕ್ಕಿದ್ದರೂ ಸಾಧ್ಯವಾಗುತ್ತಿಲ್ಲ. ನಮ್ಮ ಉದ್ದೇಶ ಏನಿತ್ತು ಅದು ಸ್ಪಷ್ಟವಾಗಿದೆ.

Pending Civil and Criminal cases in Kollegal Court.

405. SRI G. RAJU GOWDA (Hanur).—Will the Minister for Law and Parliamentary Affairs and Veterinary and Animal Husbandry be pleased to state :—

(a) the number of Civil and Criminal cases pending for the last two years in the Court of Kollegal Taluk;

(b) whether action will be taken for opening of one more Court at Hanur as the distance from the border village to Kollegal Taluk in 70 miles and it is too expensive for them, to seek justice;

(c) whether it has come to the notice of Government that the present Court of Kollegal is having indequate accommodation whether action will be taken to construct a separate building elsewhere instead of expanding the present one?

SRI Y. RAMAKRISHNA (Minister for Law and Parliamentary Affairs and Veterinary and Animal Husbandry)—

(a) As on 1-3-81 :

Civil cases (including Debt Relief Act)	...	19,149
Criminal cases	...	158

(b) There is no proposal at all to open a Court at Hanur for the moment.

(c) It has not come to the notice of Government that there is indequate accommodation at the Court of Kollegal. No suggestions were received for its expansion. Suitable action will be taken if suggestions were received.

ಶ್ರೀ ಜಿ. ರಾಜುಗೌಡ —ಸ್ವಾಮಿ, ಕೊಳ್ಳೇಗಾಲ ನ್ಯಾಯಾಲಯದಲ್ಲಿ ಕಳೆದ ೨ ವರ್ಷಗಳಿಂದ ಸಿವಿಲ್ ಸಿವಿಲ್ ಮೊಕದ್ದಮೆಗಳೂ, ಸಿವಿಲ್ ಕ್ರಿಮಿನಲ್ ಮೊಕದ್ದಮೆಗಳೂ ಇತ್ಯರ್ಥವಾಗದೆ ಹಾಗೇ ಉಳಿದಿರುವುದಾಗಿ ತಾವು ಹೇಳಿದ್ದೀರಿ. ಹಾಗಾದರೆ ಸರೆಪುನೆಯಲ್ಲಿ ಇರತಕ್ಕ ಜೈಲಿಗಳ ಗತಿ ಏನು?

ಶ್ರೀ ವೈ. ರಾಮಕೃಷ್ಣ.—ಕೇಸು ಇತ್ಯರ್ಥವಾಗುವವರೆಗೆ ಇರಬೇಕಾಗುತ್ತದೆ.

ಶ್ರೀ ಜಿ. ರಾಜುಗೌಡ.—ಇಷ್ಟೊಂದು ಕೇಸುಗಳು ಪೆಂಡಿಂಗ್ ಇರುವುದರಿಂದ ಇವುಗಳನ್ನು ಬೇಗನೆ ಇತ್ಯರ್ಥ ಮಾಡಲು ಇನ್ನೊಬ್ಬ ನ್ಯಾಯಾಧೀಶರನ್ನು ನೇಮಕ ಮಾಡುತ್ತೀರಾ ಸ್ವಾಮಿ? ತಾವು ನೇಮಕ ಮಾಡದೇ ಹೋದರೆ ಈ ಕೇಸುಗಳು ಇತ್ಯರ್ಥವಾಗಲು ಇನ್ನೂ ಹತ್ತಾರು ವರ್ಷಗಳಾಗಬಹುದು

ಶ್ರೀ ವೈ. ರಾಮಕೃಷ್ಣ.—ಇದನ್ನು ಪರಿಶೀಲಿಸಲಾಗುತ್ತದೆ.